2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ110/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರಮೇಶ್ | ಪಿಡಬ್ಲೂ-1 |
| ತಂದೆಯ ಹೆಸರು | - | ಶಿವಣ್ಣ | ಸಿಡಬ್ಲೂ - 1 |
| ವಯಸ್ಸು | - | 39 ವರ್ಷ | |
| ಉದ್ಯೋಗ | - | ಪೇಂಟಿಂಗ್ | |
| ವಾಸ ಸ್ಥಳ | - | ಬೀರೂರು | |

ದಿನಾಂಕಃ 27.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಆತ ನಮ್ಮ ಮನೆಯ ಎದುರಿಗೆ ವಾಸವಾಗಿದ್ದಾನೆ. ಚಾಸಾ.2 ನನ್ನ ತಮ್ಮ. ಚಾಸಾ.3 ನನ್ನ ಸೋದರತ್ತೆ. ಚಾಸಾ.4 ನನ್ನ ತಾಯಿ. ಚಾಸಾ.5 ಗೊತ್ತು. ಚಾಸಾ.6 ಗೊತ್ತು. ಚಾಸಾ.7 ನನ್ನ ಅತ್ತೆಯ ಮಗ. ಚಾಸಾ.8, 9 ಮತ್ತು ಚಾಸಾ.11 ರವರು ಗೊತ್ತು. ಚಾಸಾ.10 ನನ್ನ ದೂರದ ಸಂಬಂಧಿ.

2. ಬೀರೂರಿನಲ್ಲಿ ನಾನು, ನನ್ನ ಹೆಂಡತಿ ಮಕ್ಕಳು ಒಂದು ಮನೆಯಲ್ಲಿ ವಾಸವಾಗಿದ್ದೇವೆ. ಮತ್ತೊಂದು ಮನೆಯಲ್ಲಿ ನನ್ನ ತಾಯಿ ಮತ್ತು ನನ್ನ ತಮ್ಮ ಅಂದರೆ ಚಾಸಾ.2 ಮತ್ತು ಚಾಸಾ.4 ರವರು ವಾಸವಾಗಿದ್ದಾರೆ. 2019 ಮತ್ತು 2020 ನೇ ಇಸವಿಯಲ್ಲಿ ಚಾಸಾ.3 ರವರು ನಮ್ಮ ಊರಾದ ಬೀರೂರಿನಲ್ಲಿರುವ ಅವರ ಸ್ವಂತ ಮನೆಯಲ್ಲಿ ವಾಸವಾಗಿದ್ದರು.

3. ಬೀರೂರಿನ ದರ್ಶನ್ ಫ್ಯಾಕ್ಟರಿ ಹಿಂಭಾಗದಲ್ಲಿ ನಮ್ಮ ಜಮೀನು

ಇದೆ. ಅದರ ಸರ್ವೆ ನಂಬರ್ 173/P1 ಆಗಿರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ನಮ್ಮ ಮತ್ತು ಆರೋಪಿಯ ನಡುವೆ ತಕರಾರು ಇತ್ತು. ದಿನಾಂಕ 15.05.2020 ರಂದು ಶುಕ್ರವಾರ ಬೆಳಿಗ್ಗೆ 9.30 ಗಂಟೆಗೆ ನಾನು, ನನ್ನ ತಾಯಿ, ನನ್ನ ತಮ್ಮ ಮತ್ತು ಸೋದರತ್ತೆ ಚಾಸಾ.3 ಇಂದ್ರಮ್ಮ ರವರು ಸದರಿ ಜಮೀನನ್ನು ಟ್ರಾಕ್ಟರ್ ಚಾಲಕನಾದ ಚಾಸಾ.5 ಪರಮೇಶ್ ರವರಿಂದ ಟ್ರಾಕ್ಟರ್ ನಿಂದ ಉಳುಮೆ ಮಾಡಿಸುತ್ತಿದ್ದೆವು. ಆಗ ಅಲ್ಲಿಗೆ ಆರೋಪಿ ಮಧು ಬಂದು ಸದರಿ ಜಮೀನು ನಮ್ಮ ಜಮೀನು ನೀನು ಯಾಕೆ ಉಳುಮೆ ಮಾಡುತ್ತಿದ್ದೀಯಾ ಎಂದು ನನ್ನ ಅತ್ತೆಯನ್ನು ಕುರಿತು ನಿನ್ನಿಂದಲೇ ಈ ರೀತಿ ಆಗಿರುವುದು ಎಂದು ಹೇಳಿ ಆರೋಪಿ ಆಕೆಯ ಕಪಾಳಕ್ಕೆ ಹೊಡೆದು, ಸೂಳೆ ಮುಂಡೆ ನಿನ್ನಿಂದಲೇ ಈ ರೀತಿಯಾಗಿರುವುದು ಎಂದು ಬೈದನು. ಆರೋಪಿ ದೊಣ್ಣೆಯಿಂದ ನನ್ನ ಅತ್ತೆಯ ಭುಜಕ್ಕೆ ಮತ್ತು ಸೊಂಟದ ಕೆಳಭಾಗಕ್ಕೆ ಹೊಡೆದನು, ಆಗ ಆಕೆ ಕೆಳಗೆ ಬಿದ್ದರು. ನಂತರ ಆರೋಪಿ ನನ್ನ ಅತ್ತೆಯ ಬ್ಲೌಸ್ ಮತ್ತು ಸೀರೆಯನ್ನು ಹಿಡಿದು ಎಳೆದಾಡಿದನು. ಆಗ ನಾನು ಜಗಳವನ್ನು ಬಿಡಿಸಲು ಹೋದಾಗ ಆರೋಪಿ ನಿನ್ನನ್ನು ಬಿಡುವುದಿಲ್ಲ, ಕೊಲೆ ಮಾಡುತ್ತೇನೆ ಎಂದು ಹೇಳಿ ನನ್ನ ಎಡಕಣ್ಣಿನ ಉಬ್ಬಿನ ಮೇಲೆ ದೊಣ್ಣೆಯಿಂದ ಹೊಡೆದನು. ಆಗ ಆ ಭಾಗ Open ಆಗಿ ರಕ್ತ ಸುರಿಯಿತು. ನಂತರ ನನ್ನ ತಾಯಿ ಬಿಡಿಸಲು ಬಂದಾಗ ಆರೋಪಿ ಕೈಯಿಂದ ಆಕೆಯನ್ನು ತಳ್ಳಿದನು. ಟ್ರಾಕ್ಟರ್ ಮೇಲೆ ಕುಳಿತಿದ್ದ ನನ್ನ ತಮ್ಮ ಉಮೇಶ ಜಗಳವನ್ನು ಬಿಡಿಸಲು ಬಂದಾಗ

ನಿನ್ನನ್ನೂ ಬಿಡುವುದಿಲ್ಲ, ಕೊಲೆ ಮಾಡುತ್ತೇನೆ ಎಂದು ಹೇಳಿ ಅಡಿಕೆ ದಬ್ಬೆಯಿಂದ ತಲೆಯ ಹಿಂಭಾಗಕ್ಕೆ ಹೊಡೆದನು. ಆಗ ನನ್ನ ತಮ್ಮನಿಗೆ ತಲೆಯ ಹಿಂಭಾಗದಲ್ಲಿ Open ಆಗಿ, ರಕ್ತ ಬಂದು ಆತನಿಗೆ ಜ್ಞಾನ ಇಲ್ಲದಂತಾಯಿತು. ಆರೋಪಿ ನನ್ನ ತಮ್ಮ ಉಮೇಶನಿಗೆ ಹೊಡೆದಾಗ ಆತ ಮಕಾಡೆ ಬಿದ್ದನು. ಆಗ ಆರೋಪಿ ಅಡಿಕೆ ದಬ್ಬೆಯಿಂದ ನನ್ನ ತಮ್ಮನ ಎಡಕೈ ಮೇಲೆ ಹೊಡೆದನು. ಕೂಡಲೇ ನನ್ನ ತಮ್ಮನ ಎಡಕೈ ಬೆಂಡಾಗಿ ಮುರಿದು ಹೋಗಿತ್ತು. ನಂತರ ಅಲ್ಲಿಗೆ ಚಾಸಾ.7 ಮಹೇಶ್ ರವರು ಬಂದರು. ನಂತರ ಚಾಸಾ.7 ಮಹೇಶ ಮತ್ತು ಟ್ರಾಕ್ಟರ್ ಚಾಲಕನಾದ ಪರಮೇಶ ರವರು ಸೇರಿ ನನ್ನನ್ನು, ನನ್ನ ತಮ್ಮನನ್ನು, ನನ್ನ ಅತ್ತೆಯನ್ನು ಬೀರೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದರು. ನಮ್ಮ ಜೊತೆ ನಮ್ಮ ತಾಯಿಯೂ ಸಹ ಬಂದಿದ್ದರು. ನನ್ನನ್ನು ಮತ್ತು ನನ್ನ ತಮ್ಮನನ್ನು Emergency Ward ಗೆ ದಾಖಲು ಮಾಡಿದ್ದರು. ನನ್ನ ಅತ್ತೆಗೆ ಅಲ್ಲಿಯೇ ಹೊರಗೆ ಚಿಕಿತ್ಸೆ ಕೊಟ್ಟಿದ್ದರು. ನನ್ನ ತಾಯಿಗೆ ಏನು ಪೆಟ್ಟಾಗಿರಲಿಲ್ಲ. ಸದರಿ ಆಸ್ಪತ್ರೆಯಲ್ಲಿ ನನ್ನ ಎಡಕಣ್ಣಿನ ಉಬ್ಬಿನ ಮೇಲೆ ಆಗಿದ್ದ ಗಾಯವನ್ನು ಎರಡು Stitch ಹಾಕಿ ಹೊಲೆದರು. ನನ್ನ ತಮ್ಮನ ತಲೆಯ ಹಿಂಭಾಗದಲ್ಲಿ ಆಗಿದ್ದ ಗಾಯವನ್ನು stitch ಮಾಡಿ ನಂತರ ಅಲ್ಲಿ ಆಗುವುದಿಲ್ಲವೆಂದು ಹೇಳಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ವೈದ್ಯರು ತಿಳಿಸಿದರು. ನಂತರ ಅದೇ ದಿನ ನನ್ನ ತಮ್ಮನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಪೊಲೀಸರು

ಬೀರೂರು ಸರ್ಕಾರಿ ಆಸ್ಪತ್ರೆಗೆ ಬಂದು ನನ್ನ ತಮ್ಮನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿಕೊಟ್ಟು ನನಗೆ ಠಾಣೆಗೆ ಬಂದು ದೂರು ನೀಡುವಂತೆ ತಿಳಿಸಿದ್ದರು. ಅದರಂತೆ ನಾನು ಚಿಕಿತ್ಸೆ ಪಡೆದುಕೊಂಡು ಅದೇ ದಿನ ಬೆಳಿಗ್ಗೆ 11.00 ಗಂಟೆಗೆ ಬೀರೂರು ಪೊಲೀಸ್ ಠಾಣೆಗೆ ಹೋಗಿ ಆರೋಪಿ ಮಧು ವಿರುದ್ಧ ಘಟನೆಯ ಬಗ್ಗೆ ದೂರನ್ನು ಕೊಟ್ಟಿದ್ದೇನೆ. ಸದರಿ ದೂರನ್ನು ನಾನು ಹೇಳಿದಂತೆ ಪೊಲೀಸರು ಟೈಪ್ ಮಾಡಿಕೊಂಡಿದ್ದಾರೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಕಲಂ 12 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಸಾಕ್ಷಿಯ ಸಹಿ

ಚಿಕ್ಕಮಗಳೂರು.

ದಿನಾಂಕಃ 27.09.2022 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

4. ದೂರು ನೀಡಿದ ಮಾರನೇ ದಿನ ಅಂದರೆ ದಿನಾಂಕ 16.05.2020 ರಂದು ಪೊಲೀಸರು ನನಗೆ ಫೋನ್ ಮಾಡಿ ಜಮೀನಿನಲ್ಲಿ ಗಲಾಟೆ ನಡೆದಿರುವ ಸ್ಥಳದಲ್ಲಿ ಮಹಜರ್ ಮಾಡಲು ಬರುವುದಾಗಿ ತಿಳಿಸಿದರು. ಆಗ ನಾನು ಬೆಳಿಗ್ಗೆ 10.00 ಗಂಟೆಗೆ ಸ್ಥಳಕ್ಕೆ ಹೋಗಿ ಕಾಯುತ್ತಿದ್ದೆನು. ಪೊಲೀಸರು ಬೆಳಿಗ್ಗೆ 11.00 ಗಂಟೆಗೆ ಅಲ್ಲಿಗೆ ಬಂದರು. ಅಲ್ಲಿ ಚಾಸಾ.8 ಮತ್ತು 9 ರವರು ಮಹಜರ್ ಗಾಗಿ ಬಂದಿದ್ದರು. ಪೊಲೀಸರು ಗಲಾಟೆ ನಡೆದ ಸ್ಥಳವನ್ನು ತೋರಿಸುವಂತೆ ಕೇಳಿದರು. ಆಗ ನಾನು ಸರ್ವೆ ನಂಬರ್ 173/P1 ರಲ್ಲಿ ಆರೋಪಿ ಮಧು ನನ್ನ, ನನ್ನ ತಮ್ಮ, ನನ್ನ ತಾಯಿ ಮತ್ತು ನನ್ನ ಅತ್ತೆಯ ಮೇಲೆ ಹಲ್ಲೆ ಮಾಡಿ ಗಲಾಟೆ ಮಾಡಿದ ಸ್ಥಳವನ್ನು ಪೊಲೀಸರಿಗೆ ತೋರಿಸಿದೆನು. ಆರೋಪಿ ಹಲ್ಲೆ ಮಾಡಲು ಬಳಸಿದ್ದ ದೊಣ್ಣೆಯನ್ನು ನಾನು ಮತ್ತು ಪೊಲೀಸರು ಹುಡುಕಾಡಿದೆವು. ನಮ್ಮ ಜಮೀನಿನ ಪಕ್ಕದಲ್ಲಿ ಇದ್ದ ಕಾಲು ದಾರಿಯ ಪಕ್ಕದಲ್ಲಿ ಇದ್ದ ಪೊದೆಯಲ್ಲಿ ಆ ದೊಣ್ಣೆ ಇತ್ತು. ಅದು ನನ್ನ ಕಣ್ಣಿಗೆ ಬಿತ್ತು. ನಾನು ಅದನ್ನು ಪೊಲೀಸರಿಗೆ ತೆಗೆದುಕೊಟ್ಟೆನು. ಅದು ಅಡಿಕೆ ದಬ್ಬೆಯಾಗಿತ್ತು. ಅದನ್ನು ಪೊಲೀಸರು ಮಹಜರ್ ಮಾಡಿಕೊಂಡು ಅಮಾನತುಪಡಿಸಿಕೊಂಡರು. ಆ ಸಮಯದಲ್ಲಿ ಫೋಟೋಗಳನ್ನು ತೆಗೆದುಕೊಂಡರು. ನನಗೆ ತಲೆಗೆ ಪೆಟ್ಟು

ಬಿದ್ದಿದ್ದರಿಂದ ಎಷ್ಟು ದೊಣ್ಣೆ ಎಂದು ಆಗ ಸರಿಯಾಗಿ ಗೊತ್ತಿರಲಿಲ್ಲ. ಮಹಜರನ್ನು ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ನನ್ನ ಮತ್ತು ಚಾಸಾ.8 ವೆಂಕಟೇಶ್ ಮತ್ತು ಚಾಸಾ.9 ಉಮೇಶ್ ರವರ ಸಮಕ್ಷಮ ಪೊಲೀಸರು ಬರೆದುಕೊಂಡು ಅದಕ್ಕೆ ನಮ್ಮ ಸಹಿಗಳನ್ನು ಪಡೆದುಕೊಂಡರು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಹಜರನ್ನು ನಿಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

5. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ಸರ್ವೆ ನಂಬರ್ 173/P1 ರ ಜಮೀನಿನಲ್ಲಿ ಕೃತ್ಯ ನಡೆದ ಸ್ಥಳ ಕಂಡು ಬರುತ್ತದೆ. ಸದರಿ ಫೋಟೋಗಳಲ್ಲಿ ನಾನು, ಪೊಲೀಸರು ಮತ್ತು ಚಾಸಾ.8 ಮತ್ತು 9 ಇದ್ದೇವೆ. ಸದರಿ ಫೋಟೋಗಳಲ್ಲಿ ನನ್ನ ತಲೆಗೆ ಬ್ಯಾಂಡೇಜ್ ಹಾಕಿರುವುದು ಕಂಡು ಬರುತ್ತದೆ. ಸದರಿ ಫೋಟೋಗಳನ್ನು ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು. ನಿಪಿ.5 ಫೋಟೋದಲ್ಲಿ ಆರೋಪಿ ಆ ದಿನ ನನ್ನ, ನನ್ನ ತಮ್ಮ ಮತ್ತು ಅತ್ತೆಯ ಮೇಲೆ ಹಲ್ಲೆ ಮಾಡಿದ ಅಡಿಕೆ ದಬ್ಬೆಯನ್ನು ನಾನು ಪೊಲೀಸರಿಗೆ ಹಾಜರುಪಡಿಸುತ್ತಿರುವುದು ಕಂಡು ಬರುತ್ತದೆ. ಸದರಿ ಅಡಿಕೆ ದಬ್ಬೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ಅಡಿಕೆ ದಬ್ಬೆಯನ್ನು ನೋಡಿ ಗುರುತಿಸಿ ಆರೋಪಿ ನಮ್ಮ ಮೇಲೆ

ಹಲ್ಲೆ ಮಾಡಿದ ದಬ್ಬೆ ಅದೇ ಎಂದು ನುಡಿದ ಮೇರೆಗೆ ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

6. ಘಟನಾ ಸಮಯದಲ್ಲಿ ನಾನು ಬಿಳಿ ಮತ್ತು ನೀಲಿ ಬಣ್ಣದ ತುಂಬು ತೋಳಿನ ಶರ್ಟನ್ನು ಧರಿಸಿದ್ದೆನು ಮತ್ತು ನನ್ನ ತಮ್ಮ ಆರೆಂಜ್ ಬಣ್ಣದ ಟೀ ಶರ್ಟನ್ನು ಧರಿಸಿದ್ದನು. ಅವುಗಳಿಗೆ ರಕ್ತದ ಕಲೆಗಳಾಗಿದ್ದವು. ಅವುಗಳನ್ನು ಪೊಲೀಸರು ಮಹಜರ್ ಗೆಂದು ಕೇಳಿದ್ದರು. ದಿನಾಂಕ 20.05.2020 ರಂದು ಬೀರೂರು ಪೊಲೀಸ್ ಠಾಣೆಗೆ ಹೋಗಿ ಸದರಿ ಬಟ್ಟೆಗಳನ್ನು ಪೊಲೀಸರಿಗೆ ನೀಡಿದ್ದೇನೆ. ಆಗ ಬೆಳಿಗ್ಗೆ ಸಮಯ 10.30 ಗಂಟೆಯಾಗಿತ್ತು. ಸದರಿ ಬಟ್ಟೆಗಳನ್ನು ಪೊಲೀಸರು ಬೆಳಿಗ್ಗೆ 10.30 ಗಂಟೆಯಿಂದ 11.30 ಗಂಟೆಯವರೆಗೆ ಮಹಜರ್ ಮಾಡಿ ಅಮಾನತುಪಡಿಸಿಕೊಂಡು ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಮಹಜರ್ ಗಾಗಿ ಚಾಸಾ.10 ಧನರಾಜ್ ಮತ್ತು ಚಾಸಾ.11 ಹನುಮಂತರಾಜು ರವರು ಬಂದಿದ್ದರು ಮತ್ತು ಅವರು ಸಹ ಸಹಿ ಮಾಡಿದ್ದಾರೆ. ಸದರಿ ಮಹಜರ್ ನ್ನು ಮಾಡಿಕೊಳ್ಳುವ ಸಮಯಕ್ಕೆ ಪೊಲೀಸರು ಫೋಟೋವನ್ನು ತೆಗೆದುಕೊಂಡರು. ಸದರಿ ಮಹಜರ್ ನ್ನು ಮತ್ತು ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಮಹಜರ್ ನ್ನು ನಿಪಿ.6 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಫೋಟೋವನ್ನು

ನೋಡಿ ಗುರುತಿಸಿ ಅದರಲ್ಲಿ ಘಟನಾ ಸಮಯದಲ್ಲಿ ನಾನು ಮತ್ತು ನನ್ನ ತಮ್ಮ ಧರಿಸಿದ್ದ ರಕ್ತದ ಕಲೆಗಳಾಗಿದ್ದ ಶರ್ಟ್ ಮತ್ತು ಟೀ ಶರ್ಟನ್ನು ಪೊಲೀಸರಿಗೆ ಹಾಜರುಪಡಿಸುವಾಗ ತೆಗೆದುಕೊಂಡಿದ್ದಾಗಿ ನುಡಿದಿರತ್ತಾರೆ. ಸದರಿ ಫೋಟೋವನ್ನು ನಿಪಿ.7 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ನನ್ನೊಂದಿಗೆ ಚಾಸಾ.10 ಮತ್ತು 11 ರವರು ಇದ್ದಾರೆ. ಸದರಿ ಶರ್ಟ್ ಮತ್ತು ಟೀ ಶರ್ಟನ್ನು ನೋಡಿದರೆ ಗುರುತಿಸುತ್ತೇನೆ.

7. ಬಿಳಿಯ ಬಟ್ಟೆಯಲ್ಲಿ ಹೊಲೆದು, ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದ ಒಂದು ನೀಲಿ ಬಿಳಿ ಮಿಶ್ರಿತ ತುಂಬು ತೋಳಿನ ಶರ್ಟು ಮತ್ತು ತಿಳಿ ಕೇಸರಿ ಬಣ್ಣದ ಟೀ ಶರ್ಟನ್ನು ಆರೋಪಿ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿ ಘಟನಾ ಸಮಯದಲ್ಲಿ ನಾನು ಧರಿಸಿದ್ದ ಶರ್ಟು ಮತ್ತು ನನ್ನ ತಮ್ಮ ಉಮೇಶ ಧರಿಸಿದ್ದ ಟೀ ಶರ್ಟು ಅವೇ ಎಂದು ನುಡಿದ ಮೇರೆಗೆ ಅವುಗಳನ್ನು ಕ್ರಮವಾಗಿ ಮು.ಮಾ. 2 ಮತ್ತು 3 ಎಂದು ಗುರುತಿಸಲಾಯಿತು. ಸದರಿ ಶರ್ಟುಗಳ ಮೇಲೆ ರಕ್ತದ ಕಲೆಗಳಾಗಿರುವುದಾಗಿ ಸಾಕ್ಷಿಯು ನುಡಿದಿರುತ್ತಾರೆ. ಮು.ಮಾ.2 ಮತ್ತು 3 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿ ಅವುಗಳನ್ನು ಪೊಲೀಸರು ಮಹಜರ್ ಮಾಡಿಕೊಂಡ ಸಮಯದಲ್ಲಿ ಮಾಡಿದ್ದೇನೆ ಎಂದು ನುಡಿದಿರುತ್ತಾರೆ. ಸದರಿ ಸಹಿಗಳನ್ನು ಮು.ಮಾ.2(ಎ) ಮತ್ತು ಮು.ಮಾ.3(ಎ) ಎಂದು

ಗುರುತಿಸಲಾಯಿತು.

8. ನಾನು ದೂರು ನೀಡಲು ಹೋದಾಗ ಪೊಲೀಸರು ನನ್ನ ರಕ್ತದ ಕಲೆಗಳಾಗಿದ್ದ ಶರ್ಟನ್ನು ಮಹಜರ್ ಗಾಗಿ ಕೊಡುವಂತೆ ಕೇಳಿದ್ದರು, ಆದರೆ ಆಗ ನನ್ನ ಬಳಿ ಬೇರೆ ಶರ್ಟು ಇರದಿದ್ದರಿಂದ ನಾನು ಮನೆಗೆ ಹೋಗಿ ಬಟ್ಟೆಯನ್ನು ಬದಲಿಸಿ ಸದರಿ ಶರ್ಟನ್ನು ಪೊಲೀಸರಿಗೆ ಕೊಟ್ಟಿದ್ದೇನೆ ಮತ್ತು ನನ್ನ ತಮ್ಮನ ಶರ್ಟನ್ನು ಮೆಗ್ಗಾನ್ ಆಸ್ಪತ್ರೆಯಿಂದ ತಂದು ಕೊಟ್ಟಿದ್ದೇನೆ.

9. ದಿನಾಂಕ 16.05.2020 ರಂದು ನಾನು ಪೊಲೀಸ್ ಠಾಣೆಗೆ ಹೋಗಿದ್ದೆನು, ಆಗ ನಾನು ಪೊಲೀಸರಿಗೆ ಮಹಜರ್ ಮಾಡಿಸಿದ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದೇನೆ. ಆರೋಪಿ ಕೃತ್ಯಕ್ಕೆ ಬಳಸಿದ್ದು ಒಂದೇ ದೊಣ್ಣೆ ಅಂದರೆ ಅಡಿಕೆ ದಬ್ಬೆ. ನಾನು ಕೇವಲ ಬೀರೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇನೆ.

(ಪಾಟೀ ಸವಾಲು: ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲನ್ನು ಚಾಸಾ.2 ರಿಂದ ಚಾಸಾ.5 ರವರ ವಿಚಾರಣೆಯಾದ ನಂತರ ಮಾಡುವುದಾಗಿ ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದು, ಅದನ್ನು ನ್ಯಾಯಾಲಯ ಪುರಸ್ಕರಿಸಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ